ಹಸಿರು ವಲಯದಿಂದ ಭೂಮಿ ಮುಕ್ತಗೊಳಿಸುವುದು

**1302(1581); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಹಸಿರು ವಲಯದಿಂದ ಎಷ್ಟು ಎಕರೆ ಭೂಮಿಯನ್ನು ಮುಕ್ತಗೊಳಿಸಿ, ಭೂ ಉಪಯೋಗಕ್ಕೆ ವರ್ಗಾಯಿಸಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಭೂ ಉಪಯೋಗ ಬದಲಾವಣೆಗಾಗಿ ಎಷ್ಟು ಕಡತಗಳು ಸರ್ಕಾರದ ಮುಂದಿದೆ (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಹಸಿರು ವಲಯದಿಂದ 5587 ಎಕರೆ 19 ಗುಂಟೆ ವಿಸ್ತೀರ್ಣದ ಭೂಮಿಯನ್ನು ಮುಕ್ತಗೊಳಿಸಿ ಭೂ ಉಪಯೋಗಕ್ಕೆ ವರ್ಗಾಯಿಸಲಾಗಿದೆ. (ಭೂ ಉಪಯೋಗ ಬದಲಾವಣೆಗೆ ಪ್ರಸ್ತಾವನೆಗಳು ಸರ್ಕಾರದಲ್ಲಿ ಪ್ರಾಧಿಕಾರವಾರು ಸ್ವೀಕೃತವಾಗುವುದರಿಂದ ಪ್ರಾಧಿಕಾರವಾರು ವಿವರಗಳನ್ನು ಅನುಬಂಧದಲ್ಲಿರುವಂತೆ ನೀಡಲಾಗಿದೆ).

ಆ) 188 ಕಡತಗಳು/ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಾಕಿ ಇವೆ (ಪ್ರಾಧಿಕಾರವಾರು ವಿವರಗಳನ್ನು ಅನುಬಂಧದಲ್ಲಿರುವಂತೆ ನೀಡಲಾಗಿದೆ).

## ಅನುಬಂಧ

ಹಸಿರು ವಲಯದಿಂದ ಮುಕ್ತಗೊಳಿಸಿರುವ ಜಮೀನಿನ ಹಾಗೂ ಸರ್ಕಾರದಲ್ಲಿ ಭೂ ಉಪಯೋಗ ಬದಲಾವಣೆಗಾಗಿ ಸರ್ಕಾರದ ಮುಂದೆ ಇರುವ ಕಡತಗಳ ವಿವರ

| ಕ್ರಮ ಸಂಖ್ಯೆ | ನಗರಾಭಿವೃದ್ಧಿ ಪ್ರಾಧಿಕಾರಿಗಳು | ಹಸಿರು ವಲಯದಿಂದ ಮುಕ್ತಗೊಳಿಸಿರುವ ಜಮೀನಿನ ವಿಸ್ತೀರ್ಣ | ಸರ್ಕಾರದಲ್ಲಿ ಭೂ ಉಪಯೋಗ ಬದಲಾವಣೆಗಾಗಿ ಸರ್ಕಾರದ ಮುಂದೆ ಇರುವ ಕಡತಗಳು |
|---|---|---|---|
| 1 | ಬೆಳಗಾವಿ | 9 ಎಕರೆ 1 ಗುಂಟೆ | --- |
| 2 | ಗುಲಬರ್ಗಾ | --- | 1 |
| 3 | ಹುಬ್ಬಳ್ಳಿ-ಧಾರವಾಡ | 512 ಎಕರೆ 7.5 ಗುಂಟೆ | 15 |
| 4 | ಮೈಸೂರು | 1080 ಎಕರೆ 9 ಗುಂಟೆ | --- |
| 5 | ಮಂಗಳೂರು | 10 ಎಕರೆ 68 ಸೆಂಟ್ಸ್ | 22 |
| 6 | ಗದಗ-ಬೆಟಗೇರಿ | 190 ಎಕರೆ 28 ಗುಂಟೆ | --- |
| 7 | ಹಾವೇರಿ | 4 ಎಕರೆ | --- |
| 8 | ರಾಯಚೂರು | --- | --- |
| 9 | ಬಿಜಾಪುರ | 658 ಎಕರೆ 8 ಗುಂಟೆ | 95 |
| 10 | ಬೀದರ | 16 ಎಕರೆ | --- |
| 11 | ಬಳ್ಳಾರಿ | --- | --- |
| 12 | ಹೊಸಪೇಟೆ | --- | 2 |
| 13 | ಕೊಪ್ಪಳ | 111 ಎಕರೆ 27 ಗುಂಟೆ | --- |
| 14 | ತುಮಕೂರು | 2 ಎಕರೆ 34 ಗುಂಟೆ | --- |
| 15 | ಕಾರವಾರ | --- | --- |
| 16 | ಚಿತ್ರದುರ್ಗ | 15 ಎಕರೆ 20 ಗುಂಟೆ | 13 |
| 17 | ದಾವಣಗೆರೆ-ಹರಿಹರ | 141 ಎಕರೆ 28 ಗುಂಟೆ | --- |
| 18 | ಶಿವಮೊಗ್ಗ | --- | --- |
| 19 | ರಾಮನಗರ-ಚನ್ನಪಟ್ಟಣ | --- | --- |
| 20 | ಕೋಲಾರ | 4 ಎಕರೆ 29 ಗುಂಟೆ | --- |
| 21 | ಕೆ.ಜಿ.ಎಫ್ | --- | --- |
| 22 | ಮಂಡ್ಯ | 21 ಎಕರೆ 30.12 ಗುಂಟೆ | --- |
| 23 | ಹಾಸನ | --- | --- |
| 24 | ಚಿಕ್ಕಮಗಳೂರು | --- | --- |
| 25 | ಚಾಮರಾಜನಗರ | 12 ಎಕರೆ 34 ಗುಂಟೆ | 1 |

| | | | |
|---|---|---|---|
| 26 | ಮಡಿಕೇರಿ | --- | 4 |
| 27 | ಉಡುಪಿ | 43 ಎಕರೆ 87 ಸೆಂಟ್ಸ್ | 3 |
| 28 | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ | --- | --- |
| 29 | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ | 2585 ಎಕರೆ 18"" ಗುಂಟೆ | 36 |
| 30 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | 30 ಎಕರೆ 34 ಗುಂಟೆ | --- |
| 31 | ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ | 125 ಎಕರೆ 34 ಗುಂಟೆ | 6 |
| | ಒಟ್ಟು | 5587 ಎಕರೆ 19 ಗುಂಟೆ | 188 |

**ವಾಣಿಜ್ಯ ಇಲಾಖೆಯಲ್ಲಿ ಸಂಗ್ರಹವಾದ ತೆರಿಗೆ ಹಣ**

**1303(1583); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ),**

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಿಂದ ವಿವಿಧ ರೂಪದಲ್ಲಿ ಸಂಗ್ರಹವಾದ ತೆರಿಗೆ ಹಣವೆಷ್ಟು (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ತೆರಿಗೆ ರೂಪದಲ್ಲಿ ವರ್ಷಕ್ಕೆ ಎಷ್ಟು ಹಣದ ಮೊತ್ತದ ಹಣವನ್ನು ಕ್ರೂಢೀಕರಿಸುವ ಗುರಿ ಹೊಂದಲಾಗಿತ್ತು; ಕ್ರೂಢೀಕರಿಸಿದ ಹಣವೆಷ್ಟು (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು);

ಇ) ರಾಜ್ಯದಲ್ಲಿ ₹ 10.00 ಲಕ್ಷಗಳಿಗೂ ಹೆಚ್ಚು ಮೊತ್ತದ ಹಣವನ್ನು ವಾಣಿಜ್ಯ ತೆರಿಗೆ ಕಟ್ಟದೆ ವಂಚಿಸಿರುವ ಸಂಸ್ಥೆ/ವ್ಯಕ್ತಿಗಳ ಹಾಗೂ ಇವರ ವಿರುದ್ಧ ತೆಗೆದುಕೊಂಡ ಕ್ರಮಗಳೇನು (ಜಿಲ್ಲಾವಾರು ಮಾಹಿತಿ ನೀಡುವುದು)?